**ದಿ:07.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

ಪಾಟೀ ಸವಾಲು:- ಆರೋಪಿ ಪರ G.H.S.,ವಕೀಲರಿಂದ:-

ನಾನು ಬಂಗಾರದ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತೇನೆ . ಸದರಿ ಅಂಗಡಿಯು ನನ್ನ ಸ್ವಂತ ಅಂಗಡಿ ಇರುತ್ತದೆ . ನಾನು ಆಧಾಯ ತೆರಿಗೆ ಪಾವತಿದಾರ ಇರುತ್ತೇನೆ . ನನಗೆ ಆರೋಪಿ ಕಳೆದ 10-15 ವರ್ಷದಿಂದ ಪರಿಚಯ ಇರುತ್ತಾರೆ . ಆರೋಪಿಯು ನನ್ನ ಅಂಗಡಿಗೆ ಬಂದಿ ಹೋಗಿ ಮಾಡುತ್ತಿದ್ದರು ಆದ ಕಾರಣ ಪರಿಚಯ ಇರುತ್ತಾರೆ . ಆರೋಪಿಯು ಜಗಳೂರು ಟೌನ್ **SBI** ಬ್ಯಾಂಕ್ ನ ಪಕ್ಕದಲ್ಲಿ ಪುಸ್ತಕದ ಅಂಗಡಿ ಇಟ್ಟುಕೊಂಡಿರುತ್ತಾರೆ . ನಾನು ಸದರಿ ಪುಸ್ತಕದ ಅಂಗಡಿಗೆ ಆಗಾಗ ಹೋಗುತ್ತಿದ್ದೆ . ಆರೋಪಿಯು ನನಗೆ **1** ತಿಂಗಳ ಹಿಂದೆ ಹಣಬೇಕೆಂದು ನನ್ನ ಅಂಗಡಿಗೆ ಬಂದು ಕೇಳಿರುತ್ತಾರೆ . ಅಗ ನನ್ನನ್ನು ಬಿಟ್ಟು ಬೇರೆ ಯಾರು ಇರುವುದಿಲ್ಲ. ನಾನು ಸದರಿ ದಿನದ **1** ತಿಂಗಳ ನಂತರ ದಿ:**22.08.2021** ರಂದು ಆರೋಪಿಗೆ ಹಣ ನೀಡಿರುತ್ತೇನೆ . ಸದರಿ ವ್ಯವಹಾರವನ್ನು ಯಾರು ನೋಡಿರುವುದಿಲ್ಲ . ನಾನು ನಮ್ಮ ಅಂಗಡಿಯಲ್ಲಿ ಆರೋಪಿಗೆ ಹಣವನ್ನು ನೀಡಿರುತ್ತೇನೆ . ನಮ್ಮ ಅಂಗಡಿಯಲ್ಲಿ ಸಿಸಿ ಟಿ ವಿ ಕ್ಯಾಮಾರ ಅಳವಡಿಸಿರುತ್ತೇವೆ ಎಂದರೆ ಸರಿ. ಸದರಿ ವ್ಯವಹಾರ ಸಿಸಿ ಕ್ಯಾಮಾರದಲ್ಲಿ ಸೆರೆಯಾಗಿರುತ್ತದೆ ಎಂದರೆ ಸರಿ. ಸಿಸಿ ಟಿವಿ ರೆಕಾರ್ಡಿಂಗ್ ನನ್ನ ಬಳಿ ಇರುತ್ತದೆ ಎಂದರೆ ಸರಿ. ನನಗೆ ಭರತ್ ರಾಜ್ , ಮಹಾಂತೇಶ್ ಮತ್ತು ಲೊಕೇಶ್ ಎಂಬುವವರು ಪರಿಚಯ ಇರುತ್ತಾರೆ ಎಂದರೆ ಸರಿಯಲ್ಲ . ಇದೇ ಆರೋಪಿ ಮೇಲೆ ಸದರಿಯವರು ಚೆಕ್ ಅಮಾನತುಪ್ರಕರಣ ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಸದರಿ ಪ್ರಕರಣಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು ಆರೋಪಿ ಗೆ ಕಳುಹಿಸಿದ ನೋಟೀಸ್ ಅಲ್ಲಿ ಆರೋಪಿ ನನಗೆ ಒಂದು ತಿಂಗಳ ಹಿಂದೆ ಹಣ ಕೇಳಿದ ಬಗ್ಗೆ ಅದರಲ್ಲಿ ಬರೆಸಿರುತ್ತೇನೆ . ನನ್ನ ಅಧಾಯ ತೆರಿಗೆಯಲ್ಲಿ ಆರೋಪಿಗೆ ನೀಡಿದ ಹಣವನ್ನು ನಮೂದು ಮಾಡಿರುತ್ತೇನೆ . ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ . ನನಗೆ ಆರೋಪಿ ನಿಪಿ **1** ಚೆಕ್ ಅನ್ನು ನೀಡಿದಾಗ ಯಾವುದೇ ವ್ಯವಹಾರ ನಡೆದಿರುವುದಿಲ್ಲ . ನಿಪಿ **1** ಚೆಕ್ ದಿನಾಂಕ: **24.01.2022** ರಂದು ನನ್ನ ಮತ್ತು ಆರೋಪಿ ನಡುವೆ ಯಾವುದೇ ವ್ಯವಹಾರ ನಡೆದಿರುವುದಿಲ್ಲ ಎಂದರೆ

ಸಾಕ್ಷಿ ನಾನು ಅವತ್ತು ಆರೋಪಿಗೆ **5** ಲಕ್ಷ ಹಣವನ್ನು ನೀಡಿರುತ್ತೇನೆ ಎಂದು ಹೇಳುತ್ತಾರೆ **.** ದಿ:**22.08.2021** ಅಥವಾ ದಿ:**24.01.2022** ರಂದು ಆರೋಪಿಗೆ ಯಾವುದೇ ಹಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಚೆಕ್ ಅನ್ನು ಎಷ್ಟು ದಿನದ ಅವದಿ ವರೆಗೂ ಬಳಸಿಕೊಳ್ಳಬಹುದು ಎಂದರೆ ಸಾಕ್ಷಿ 5-8 ತಿಂಗಳೊಳಗೆ ಎಂದು ಹೇಳುತ್ತಾರೆ . ಸದರಿ ನಿಪಿ 1 ಚೆಕ್ ಪೊಸ್ಟ್ ಡೇಟೇಟ್ ಚೆಕ್ ಇರುತ್ತದೆ ಎಂದರೆ ಸಾಕ್ಷಿ ಪೋಸ್ಟ್ ಡೇಟೇಟ್ ಎಂದರೆ ಪೊಸ್ಟ್ ನಿಂದ ಬರುವ ಚೆಕ್ ಇರುತ್ತದೆ ಎಂದು ಹೇಳುತ್ತಾರೆ . ನನ್ನ ಹೆಸರಿಗೆ ಜಗಳೂರಿನಲ್ಲಿ 3 ಬ್ಯಾಂಕ್ ಗಳಲ್ಲಿ ಖಾತೆ ಇರುತ್ತದೆ . ಸದರಿ ಬ್ಯಾಂಕ್ ಗಳು DCC ಬ್ಯಾಂಕ್ , ಕೆನರಾ ಬ್ಯಾಂಕ್ ಮತ್ತು SBI ಬ್ಯಾಂಕ್ ಇರುತ್ತದೆ . ನನ್ನ ಬಂಗಾರದ ಅಂಗಡಿಯ ವ್ಯವಹಾರವು ಕೂಡ ಕೆನರಾ ಬ್ಯಾಂಕ್ ನಲ್ಲಿ ಮಾಡುತ್ತೇನೆ . ನಾನು ದ್ವೀತಿಯ ಪಿಯುಸಿವರೆಗೂ ಓದಿರುತ್ತೇನೆ . ಆರೋಪಿಯು ನಾನು ಹಣ ನೀಡಿದ ದಿನದಂದು ನಿಪಿ **1** ಅನ್ನು ಬರೆದುಕೊಟ್ಟಿರುತ್ತಾರೆ **.** ನಿಪಿ **1** ರಲ್ಲಿರುವ ಬರವಣಿಗೆ ಭರತ್ ರಾಜ್ ಅವರದ್ದು ಇರುತ್ತದೆ **.** ನಿಪಿ **1** ರಲ್ಲಿರುವ ಬರವಣಿಗೆ ಮತ್ತು ಸಹಿಯು ಆರೋಪಿಯದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ **1** ಚೆಕ್ ಅನ್ನು ಭರತ್ ರಾಜ್ ಎಂಬುವವರಿಂದ ಪಡೆದುಕೊಂಡು ಆರೋಪಿ ವಿರುದ್ದ ದುರುಪಯೋಗಪಡಿಸಿಕೊಂಡಿರುತ್ತೀನಿ ಎಂದರೆ ಸರಿಯಲ್ಲ. ಆರೋಪಿ ತನ್ನ ಮನೆಯ ಖರ್ಚಿಗಾಗಿ ನನ್ನ ಬಳಿ ಸಾಲ ಕೇಳಿರುತ್ತಾರೆ . ಆರೋಪಿಯ ಪೂರ್ತಿ ಹೆಸರು ಭರತ್ ಕುಮಾರ್ ತಂದೆ ಹಾಲಪ್ಪ ಇರುತ್ತದೆ . ಸದರಿ ಹೆಸರನ್ನು ನಾನು ದೂರಿನಲ್ಲಿಯು ಸಹ ತಿಳಿಸಿರುತ್ತೇನೆ . ಆರೋಪಿಯ ಸಂಪೂರ್ಣ ವಿಳಾಸ ನನಗೆ ಗೊತ್ತಿರುವುದಿಲ್ಲ. ದಿ:02.02.2022 ರಂದು ನೀಡಿದ ನೋಟೀಸ್ ನ ದಿನದಂದು ಆರೋಪಿಯು ತನ್ನ ಅಂಗಡಿಯಲ್ಲಿ ಬೆಳಗಿನಿಂದ ಸಂಜೆಯವರೊಗೂ ಇರುತ್ತಾರೆ ಎಂದರೆ ಸರಿಯಲ್ಲ. ಅವರು ಮನೆಯಲ್ಲಿ ಮತ್ತು ಅಂಗಡಿಯಲ್ಲಿ ಯಾವ ಸಮಯದಲ್ಲಿ ಇದ್ದರು ಹೇಳಲು ಬರುವುದಿಲ್ಲ . ನಾನು ನನ್ನ ದೂರು ಮತ್ತು ನಿಪಿ 3 ನೋಟೀಸ್ ನಲ್ಲಿ ಅಂಗಡಿ ವಿಳಾಸವನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯೊಂದಿಗೆ ಮಾಡಿದೆ ಎಂದು ಹೇಳುವ ವ್ಯವಹಾರದ ದಿನಕ್ಕೂ ಮತ್ತು ನಿಪಿ 1 ಚೆಕ್ ಅನ್ನು ನಗಧೀಕರಣಕ್ಕೆ ಸಲ್ಲಿಸಿದ ದಿನಾಂಕಕ್ಕೆ ಮಾನ್ಯತೆ ಕಳೆದುಕೊಂಡಿರುತ್ತದೆ ಎಂದರೆ ಸರಿಯಲ್ಲ. ನಿಪಿ 3 ನೋಟೀಸ್ ಆರೋಪಿಗೆ ಜಾರಿ ಆಗಿರುತ್ತದೆ . ನಿಪಿ 4 ಅಂಚೆ

ಲಕೋಟೆ ಜಾರಿ ಆಗಿರುವುದಿಲ್ಲ ವಾಪಸ್ ಆಗಿರುತ್ತದೆ ಎಂದು ನಮೂದು ಇರುತ್ತದೆ ಎಂದರೆ ಸಾಕ್ಷಿ ಜಾರಿ ಆಗಿರುತ್ತದೆ ಎಂದು ಹೇಳುತ್ತಾರೆ . ನಿಪಿ 3 ನೋಟೀಸ್ ಆರೋಪಿಗೆ ಜಾರಿ ಆಗಿರುತ್ತದೆ ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ **5** ಲಕ್ಷ ರೂಪಾಯಿ ಸಾಲ ನೀಡಿವ ಸಾಮರ್ಥ್ಯ ಮತ್ತು ಪ್ರಸಂಗ ಉದ್ಭವ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನೀಡಿದ ಎಂದು ಹೇಳುವ 5 ಲಕ್ಷ ಹಣವು ನನ್ನ ಅಂಗಡಿಯ ವ್ಯವಹಾರದಿಂದ ಬಂದ ಹಣ ಇರುತ್ತದೆ. ಸದರಿ ವ್ಯವಹಾರವನ್ನು ನಾನು ನನ್ನ ಅಧಾರ ತೆರಿಗೆಯಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಹಣವನ್ನು ನೀಡದೇ ಇರುವ ಕಾರಣ ಯಾರು ಸದರಿ ವ್ಯವಹಾರಕ್ಕೆ ಯಾರು ಸಾಕ್ಷಿದಾರರು ಇರುವುದಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಿಂದೆ ಪೋಲೀಸರು ಜಗಳೂರು ಪೋಲೀಸ್ ಠಾಣೆಯಲ್ಲಿ ನನ್ನ , ಭರತ್ ರಾಜ್ , ಮಹಾಂತೇಶ್ ಮತ್ತು ಲೋಕೇಶ್ ಎಂಬುವವರ ವಿರುದ್ದ ಆರೋಪಿ ಚೆಕ್ ದುರುಪಯೋಗ ಮತ್ತು ವಂಚನೆಯ ದೂರು ದಾಖಲಿಸಿದ್ದು , ನಮ್ಮನ್ನು ಠಾಣೆಗೆ ಕರೆಸಿ ವಿಚಾರಣೆ ನಡೆದಿರುತ್ತದೆ ಎಂದರೆ ಸರಿ.

ಈಗ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ತನ್ನ ಸಹಿ ಮತ್ತು ಹೇಳಿಕೆಯ ಲ್ಲಿರುವ ವಿಳಾಸವನ್ನು ಒಪ್ಪಿಕೊಂಡಿದ್ದು ಅದನ್ನು ನಿಡಿ 1 ಎಂದು ಗುರುತಿಸಲಾಯಿತು. ನಿಡಿ 1 ಹೇಳಿಕೆಂಹು ನ್ನು ನೀಡುವ ಸಂದರ್ಭದಲ್ಲಿ ಠಾಣೆಯಲ್ಲಿ ನಾನು ಒಬ್ಬನೇ ಹಾಜರು ಇರುತ್ತೇನೆ . ನಾನು ನಿಡಿ 1 ರಲ್ಲಿ ನನ್ನ ಮತ್ತು ಆರೋಪಿ ನಡುವೆ ನಡೆವ ವ್ಯವಹಾರದ ಬಗ್ಗೆ ಮಾತ್ರ ತಿಳಿಸಿರುತ್ತೇನೆ . ನಾನು ಆರೋಪಿಯ ಮನೆಯ ಬಳಿ ಹೋಗಿ ಗಲಾಟೆ ಮತ್ತು ಹಲ್ಲೇ ಮಾಡಿದ ಬಗ್ಗೆ ಹೇಳಿಕೆಯನ್ನು ನೀಡಿರುವುದಿಲ್ಲ **.** ಪೋಲೀಸರು ಸಹ ವಿಚಾರಣೆ ಮಾಡಿರುವುದಿಲ್ಲ **.** ನನಗೆ ಆರೋಪಿಯು ಯಾವ ವಿಚಾರಕ್ಕೆ ಸಾಲ ಪಡೆದ ಬಗ್ಗೆ ನನಗೆ ನಿಖರವಾಗಿ ಗೊತ್ತಿರುವುದಿಲ್ಲ **.** ಸಾಮಾನ್ಯವಾಗಿ **5** ಲಕ್ಷ ಹಣವು ಹೆಚ್ಚು ಮೊತ್ತ ಇರುವ ಕಾರಣ ಜಾಮೀನಿಗಾಗಿ ದಾಖಲೆಗಳನ್ನು ಪಡೆದುಕೊಳ್ಳುತ್ತಾರೆ ಎಂದರೆ ಸಾಕ್ಷಿ ನಿಪಿ **1** ಚೆಕ್ ಮಾತ್ರ ಪಡೆದುಕೊಂಡಿರುತ್ತೇನೆ ಎಂದು ಹೇಳುತ್ತಾರೆ **.** ನಾನು ಆರೋಪಿಗೆ ನಿಪಿ **3** ನೋಟೀಸ್ ಖುದ್ದು ಜಾರಿ ಆಗಿರುತ್ತದೆ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಪಿರ್ಯಾದು ಸಲ್ಲಿಸಲು ಯಾವುದೇ ವ್ಯಜ್ಯ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನಮ್ಮ ವಿರುದ್ದ ಖಾಸಗಿ ದೂರನ್ನು ಸಲ್ಲಿಸಿದ ದಿಃ **05.03.2022** ನಂತರ ನಾನು ಮತ್ತು ಇತರರು ನಿಪಿ **1** ಚೆಕ್ ಅನ್ನು ದುರುಪಯೋಗ ಪಡಿಸಿಕೊಂಡು ಈ ಪಿರ್ಯಾದನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ನನ್ನಿಂದ ಯಾವುದೇ ಹಣವನ್ನು ಸಾಲಪಡೆಯದ ಕಾರಣ ನನಗೆ ಹಣ ನೀಡುವ ಪ್ರಸಂಗ ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಭರತ್ ರಾಜ್ ಮಹಾಂತೇಶ್ ಮತ್ತು ಲೊಕೇಶ್ ಎಲ್ಲರು ಆತ್ಮೀಯರು ಇದ್ದರು ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಾಂತೇಶ್ ಮತ್ತು ಲೊಕೇಶ್ ಎಂಬುವವರು ನಾನು ಅವರೊಂದಿಗೆ ಪರಿಚಯ ಇರುತ್ತೇನೆಂದು ಇದೇ ನ್ಯಾಯಾಲಯದಲ್ಲಿ ಅವರ ಪ್ರಕರಣಗಳಲ್ಲಿ ಸಾಕ್ಷಿ ನೀಡಿರುತ್ತಾರೆ ಎಂದಗೆ ನನಗೆ ಗೊತ್ತಿಲ್ಲ **.** ನಾನು ಸದರಿ ವ್ಯವಹಾರವನ್ನು ಸನ್ **2022** ರ ಆಧಾಯ ತೆರಿಗೆಯಲ್ಲಿ ನಮೂದು ಮಾಡಿರುತ್ತೇನೆ **.** ದಿಃ **22.01.2022** ರಂದು ನನ್ನ **SBI** ಖಾತೆಗೆ ನಗಧೀಕರಿಸಲು ಜಮೆ ಮಾಡಿರುತ್ತೇನೆ **.** ನನಗೆ ನಿಪಿ **2** ದಾಖಲೆಯನ್ನು ಯಾವಾಗ ಸಿಕ್ಕಿರುವ ಬಗ್ಗೆ ಸರಿಯಾಗಿ ನೆನಪಿರುವುದಿಲ್ಲ **.** ನಿಪಿ **1** ಚೆಕ್ ಅನ್ನು **SBI** ಬ್ಯಾಂಕ್ ನವರು ನೀಡಿರುತ್ತಾರೆ **.** ಈ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ನಿಪಿ **2** ದಿನಾಂಕ ನೆನಪಿರುವುದಿಲ್ಲ**.** ನಿಪಿ **1** ಚೆಕ್ ಸಾಕಷ್ಟು ಹಣ ಇರುವುದಿಲ್ಲ ಎಂದು ವಾಪಸ್ಸಾಗಿರುತ್ತದೆ **.** ನಿಪಿ **1** ಚೆಕ್ ವಾಪಸ್ಸಾದ ದಿನಾಂಕ ಯಾವುದೇ ಇರುತ್ತದೆ ಎಂದರೆ ಸಾಕ್ಷಿ ತನ್ನ ಎಡಗೈಯಲ್ಲಿದ್ದ ಬರಹವನ್ನು ನೋಡಿಕೊಂಡು ತಿಳಿಸಿರುತ್ತಾರೆ **.** ಸಾಕ್ಷಿಯು ತನ್ನ ಎಡಗೈಯಲ್ಲಿ ದಿಃ**24.01.2022** ಹಾಗು ಚೆಕ್ ಸಂಖ್ಯೆ **775646** ಎಂದು ನಮೂದು ಮಾಡಿಕೊಂಡಿದ್ದು ಕಂಡು ಬಂದಿರುತ್ತದೆ **.** ನನಗೆ ಸಾಕ್ಷಿ ಹೇಳಲು ನ್ಯಾಯಾಲಯಕ್ಕೆ ಬಂದಾಗ ಈ ರೀತಿ ಕೈ ಮೇಲೆ ಬರೆದುಕೊಂಡು ಬರಬಾರದು ಎಂದು ತಿಳಿದಿರುತ್ತದೆ ಎಂದರೆ ಸರಿ. ನನ್ನ ಮತ್ತು ಆರೋಪಿ ನಡುವೆ ಯಾವುದೇ ವ್ಯವಹಾರ ಮಾಡದಂತೇ ಇರುವ ಕಾರಣ ಈ ರೀತಿ ಕೈ ಬರವಣಿಗೆ ಬರೆದುಕೊಂಡು ಬಂದು ಸಾಕ್ಷಿ

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಯಾವುದೇ ಹಣ ನೀಡದೇ ಇದ್ದರೂ ಸಹ ಸುಳ್ಳು ದಾಖಲೆ ಸೃಷ್ಠಿಸಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಂಗಡಿಯ ವಹಿವಾಟು ಸುಮಾರು **10** ಲಕ್ಷ ವಾರ್ಷಿಕವಾಗಿ ಇರುತ್ತದೆ ಬಂಡವಾಳ **50** ಲಕ್ಷ ಇರುತ್ತದೆ **.** ನಾವು ನಮ್ಮ ಮನೆಯಲ್ಲಿ **4** ಜನ ಇರುತ್ತೇವೆ **.** ನಮಗೆ ಅಂಗಡಿ ವರಮಾನ ಬಿಟ್ಟು ಬೇರೆ ವರಮಾನ ಇರುವುದಿಲ್ಲ **.** ನನಗೆ **8** ವರ್ಷದ ಹೆಣ್ಣು ಮಗು ಇದ್ದು **,** ಅದು ಈಗ ವಿದ್ಯಾಭ್ಯಾಸ ಮಾಡುತ್ತಾ ಇರುತ್ತದೆ **.**

**(** ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದ**,** ಆಲಿಸಿ ಸಮಯ ನೀಡಲಾಯಿತು **)**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು**.)**

ಓ ಹೇ ಕೇ ಸರಿ ಇದೆ

ಸಹಿ

ಸಿವಿಲ್ ನ್ಯಾಯಾಧೀಶರು**,** ಜಗಳೂರು